ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/427/ಎಸಿಎಂ(2)/2016-17

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ: 20-06-2017.

**-:: ಸುತ್ತೋಲೆ ::-**

**ವಿಷಯ:** 2017-18ನೇ ಸಾಲಿನ ಎಸ್.ಎಸ್.ಎಲ್.ಸಿ ವಿದ್ಯಾರ್ಹತೆಗೆ ಅನುಗುಣವಾದ ಕೋರ್ಸ್‌ಗಳ **ಪ್ರಥಮ ಸಂಜೆ ಡಿಪ್ಲೋಮಾ ಪ್ರವೇಶಕ್ಕೆ ಸಂಬಂಧಿಸಿದಂತೆ ಅರ್ಜಿಗಳ ವಿತರಣೆ ಮತ್ತು ಸ್ವೀಕರಿಸುವ ಕುರಿತು ಅವಧಿಯನ್ನು ವಿಸ್ತರಿಸುವ ಬಗ್ಗೆ.**

**ಉಲ್ಲೇಖ:** 1. ಈ ಕಛೇರಿ ಸಮ ಸಂಖ್ಯೆ ಅಧಿಸೂಚನೆ ದಿನಾಂಕ:16-05-2017.
2. ಪ್ರಿನ್ಸಿಪಾಲರು, ಸರ್ಕಾರಿ ಎಸ್.ಜೆ (ಸಂಜೆ) ಪಾಲಿಟೆಕ್ನಿಕ್, ಬೆಂಗಳೂರು ಇವರ ಪತ್ರ ಸಂ. ಎಸ್‌ಜೆಇಪಿ/01/ಪ್ರವೇಶ/2017, ದಿನಾಂಕ:20-06-2017.

-00000000-

2017-18ನೇ ಸಾಲಿನ ಪ್ರಥಮ **ಸಂಜೆ** ಡಿಪ್ಲೋಮಾ ಪ್ರವೇಶಕ್ಕೆ ಸಂಬಂಧಿಸಿದಂತೆ ಉಲ್ಲೇಖ(1)ರ ಈ ಕಛೇರಿ ಪ್ರವೇಶಾಧಿಸೂಚನೆಯಲ್ಲಿ ಎಸ್.ಎಸ್.ಎಲ್.ಸಿ ವಿದ್ಯಾರ್ಹತೆಗೆ ಪ್ರವೇಶ ಅರ್ಜಿಗಳನ್ನು ಪಡೆಯಲು ಹಾಗೂ ಸ್ವೀಕರಿಸುವ ಸಂಬಂಧ ಅಂತಿಮ ದಿನಾಂಕವನ್ನು 25-05-2017 ಎಂದು ನಿಗಧಿಪಡಿಸಿ ಪ್ರವೇಶ ಪ್ರಕ್ರಿಯೆಯನ್ನು ಆಫ್-ಲೈನ್ ಮುಖಾಂತರ ದಿ:30-05-2017ರ ಒಳಗೆ ಪ್ರಾಂಶುಪಾಲರ ಹಂತದಲ್ಲಿ ಪೂರ್ಣಗೊಳಿಸಲು ತಿಳಿಸಲಾಗಿತ್ತು.

ಉಲ್ಲೇಖ(2)ರ ಪ್ರಾಂಶುಪಾಲರ ಪತ್ರದಲ್ಲಿ 2017-18ನೇ ಸಾಲಿನಲ್ಲಿ ಎಸ್.ಜೆ ಸರ್ಕಾರಿ (ಸಂಜೆ) ಪಾಲಿಟೆಕ್ನಿಕ್ ಹಾಗೂ ಎಂ.ಇ.ಐ (ಸಂಜೆ) ಪಾಲಿಟೆಕ್ನಿಕ್‌ನ ಸೀಟುಗಳನ್ನು ಭರ್ತಿ ಮಾಡಲು ಅಭ್ಯರ್ಥಿಗಳಿಂದ ಕಡಿಮೆ ಅರ್ಜಿಗಳು ಸ್ವೀಕೃತವಾಗಿರುವುದರಿಂದ ಅರ್ಜಿ ಸ್ವೀಕರಿಸಲು ಅಂತಿಮ ದಿನಾಂಕವನ್ನು ವಿಸ್ತರಿಸಬೇಕೆಂದು ಕೋರಿರುತ್ತಾರೆ. ಈ ಸಂಬಂಧದಲ್ಲಿ ಪ್ರಾಂಶುಪಾಲರ ಮನವಿಯನ್ನು ಪರಿಗಣಿಸಿ ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ಸಾರ್ವಜನಿಕರ ಹಿತದೃಷ್ಟಿಯ ಮೇರೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಸ್ವೀಕರಿಸಲು ಈ ಕೆಳಕಂಡಂತೆ ಅವಧಿಯನ್ನು ವಿಸ್ತರಿಸಿ ಅನುಮತಿ ನೀಡಲಾಗಿದೆ.

1. **ಅರ್ಜಿ ಪಡೆಯಲು ವಿಸ್ತರಿಸಲಾದ ದಿ:28-06-2017ರ ಸಂಜೆ 5:00 ಗಂಟೆಯವರೆಗೆ**
2. **ಭರ್ತಿ ಮಾಡಿದ ಅರ್ಜಿಗಳನ್ನು ಸ್ವೀಕರಿಸಲು ದಿ:28-06-2017ರ ಸಂಜೆ 7:30 ಗಂಟೆಯೊಳಗೆ**

ಮೇಲೆ ನಮೂದಿಸಿರುವಂತೆ ಕೂಡಲೇ ಕ್ರಮ ತೆಗೆದುಕೊಂಡು ಈ ಬಗ್ಗೆ ಸ್ಥಳೀಯವಾಗಿ ಪತ್ರಿಕಾ ಪ್ರಕಟಣೆಯನ್ನು ನೀಡಿ, ನಿಯಮಗಳ ಪ್ರಕಾರ **ದಿ:30-06-2017** ರೊಳಗೆ ಪ್ರವೇಶ ಪ್ರಕ್ರಿಯೆಯನ್ನು ಪ್ರಿನ್ಸಿಪಾಲರು ತಮ್ಮ ಹಂತದಲ್ಲಿಯೇ ಅರ್ಹ ಅಭ್ಯರ್ಥಿಗಳ ಪ್ರವೇಶ ಪ್ರಕ್ರಿಯೆ ಪೂರ್ಣಗೊಳಿಸತಕ್ಕದ್ದು. **ಪ್ರಥಮ ಡಿಪ್ಲೋಮಾ ಪ್ರವೇಶಾವಧಿಯನ್ನು ಪುನಃ ವಿಸ್ತರಿಸಲಾಗುವುದಿಲ್ಲ. ಪ್ರಯುಕ್ತ, ಇದನ್ನು ಗಮನದಲ್ಲಿರಿಸಿಕೊಂಡು ನಿಯಮಗಳ ಪ್ರಕಾರ ಪ್ರವೇಶವನ್ನು ಪೂರೈಸುವಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಲಾಗಿದೆ.**

ನಿರ್ದೇಶಕರು

20/06

--2ನೇ ಪುಟಕ್ಕೆ

**ಇವರಿಗೆ,**

1. ಪ್ರಿನ್ಸಿಪಾಲರು, ಸರ್ಕಾರಿ ಎಸ್.ಜೆ (ಸಂಜೆ) ಪಾಲಿಟೆಕ್ನಿಕ್, ಬೆಂಗಳೂರು – ಸೀಟು **ಆಯ್ಕೆ ಪ್ರಕ್ರಿಯೆಯನ್ನು ತಮ್ಮ ಸಂಸ್ಥೆಯಲ್ಲಿಯೇ ನಡೆಸುವ ಬಗ್ಗೆ ತಮ್ಮ ಹಂತದಲ್ಲಿಯೇ ಕ್ರಮ ತೆಗೆದುಕೊಂಡು ನಿಯಮಗಳ ಪ್ರಕಾರ ಪ್ರವೇಶ ನಡೆಸುವಲ್ಲಿ ಸೂಕ್ತ ವ್ಯವಸ್ಥೆ ಮಾಡಿ ನಿರ್ದೇಶನಾಲಯಕ್ಕೆ ಮಾಹಿತಿ ನೀಡುವುದು. ಹಾಗೂ ಈ ಬಗ್ಗೆ ಪ್ರತ್ಯೇಕ ಮಾರ್ಗಸೂಚಿಯನ್ನು ವಿದ್ಯಾರ್ಥಿಗಳಿಗೆ ತಮ್ಮ ಸಂಸ್ಥೆಯಲ್ಲಿಯೇ ನೀಡುವುದು. ಹಾಗೂ ಸಂಸ್ಥೆಯ ಸೂಚನಾ ಫಲಕದಲ್ಲೂ ಸಹ ಪ್ರಕಟಿಸುವುದು.**
2. ಸಾರ್ವಜನಿಕ ಸಂಪರ್ಕಾಧಿಕಾರಿಗಳು, ತಾಂ.ಶಿ.ನಿ, ಬೆಂಗಳೂರು.
3. ನಿರ್ದೇಶಕರ ಆಪ್ತಶಾಖೆಗೆ.
4. ಸಂಯೋಜನಾಧಿಕಾರಿಗಳು, ಇ–ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ. ಬೆಂಗಳೂರು – ಸದರಿ ಸುತ್ತೋಲೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
5. ಕಛೇರಿ ಪ್ರತಿ.